ನಮ್ಮ ಸಮಸ್ಯೆಗಳಲ್ಲಿ ಇಷ್ಟೆಲ್ಲಾ ಸೂಕ್ಷ್ಮ ಸಂಗತಿಗಳಿವೆಯೇ ಎಂಬಂಥ ಆಶ್ಚರ್ಯವನ್ನು ಉಂಟುಮಾಡುತ್ತವೆ. ಸರಳವಾದ ದಿನನಿತ್ಯದ ಅನುಭವಗಳಲ್ಲೇ ಒಂದು ಗಾಂಭೀರ್ಯದ ರೌದ್ರ, ವಿಸಂಗತವಾದ(**paradox**) ಅನೂಹ್ಯ ಜಗತ್ತೊಂದನ್ನು ಅನಾವರಣ ಮಾಡುವುದು – ಇದು ವ್ಯಾಸರ ಕತೆ, ಕವನಗಳನ್ನು ಕುರಿತಂತೆ ಒಟ್ಟಾರೆಯಾಗಿ ಹೇಳಬಹುದಾದ ಮಾತು.

**3**

ಮನುಷ್ಯನ ಮನಸ್ಸು ಮೂಲತಃ ಎಷ್ಟು ನಿಗೂಢವಾದುದು! ಕಂಡೂ ಕಾಣದಂತೆ ನಡೆಯುವ ಅದೆಷ್ಟು ಸ್ಫೋಟಗಳು ಮನುಷ್ಯ ಮನಸ್ಸಿನಲ್ಲಿ ಆಗುತ್ತವೆ ಎನ್ನುವುದನ್ನು ವ್ಯಾಸರ ಕತೆಗಳು ತೋರಿಸುತ್ತವೆ. ಗಂಡು ಹೆಣ್ಣು ಸಂಬಂಧ, ತಂದೆ–ಮಕ್ಕಳು, ತಾಯಿ–ಮಗ, ವಯಸ್ಸಾದ ಗಂಡು –ಹೆಣ್ಣುಗಳು, ವಿವಾಹಪೂರ್ವ–ವಿವಾಹೇತರ ಸಂಬಂಧಗಳು ಹೀಗೆ ಬೇರೆ ಬೇರೆ ಸಂಗತಿಗಳು ಅಲ್ಲಿವೆ. ಓದುಗನ ಮಾತಂತಿರಲಿ, ಅಲ್ಲಿನ ಪಾತ್ರಗಳೇ ತಮ್ಮ ಮನಸ್ಸು ಮುಂದೆ ಯಾವ ರೀತಿಯಲ್ಲಿ ಸಾಗುವುದು ಎಂದು ಊಹಿಸಲಾರವು! ಓದುಗನೂ ಅಂತಹ ಸ್ಥಿತಿಗೆ ಪಕ್ಕಾಗುತ್ತಾನೆ. ನಿತ್ಯದ ಘಟನೆಗಳಿಗೆ ವಿಸ್ಮಯವನ್ನೂ ದಿಗ್ಭ್ರಮೆಯನ್ನೂ ಕುತೂಹಲವನ್ನೂ ತೋರುವುದರಲ್ಲಿ ನಾವು ಒಂದು ರೀತಿಯಲ್ಲಿ ವಿಫಲರಾಗಿದ್ದೇವೆ. ಅಂತಹ ಅನೇಕ ಸಂಗತಿಗಳ ಕಡೆಗೆ ನಮ್ಮನ್ನು ಎಚ್ಚರಿಸುವ ಕತೆಗಳು ವ್ಯಾಸರಲ್ಲಿವೆ.

ಸಿದ್ಧ ಮಾದರಿಯ ವಿಮರ್ಶೆಗಳನ್ನು ಪಕ್ಕಕ್ಕಿಟ್ಟು ಈ ಕತೆಗಳನ್ನು ನೋಡಿದರೆ ಬೇರೆ ರೀತಿ ಕಾಣಿಸಬಹುದೇನೋ ಎಂದು ನನಗೆ ಅನ್ನಿಸ್ತಾ ಇದೆ.

ಚಲನಚಿತ್ರಗಳಲ್ಲಿ ನಾವು ನೋಡುವ ಪಾತ್ರಗಳ ಮೂಲಕ ಹೇಗೆ ಒಂದು **view point** ದೊರೆಯುವುದೋ ಅದೇ ರೀತಿ ಇಲ್ಲಿಯ ಪಾತ್ರಗಳ ಮೂಲಕ ಬದುಕಿನ ಒಂದೊಂದು ದೃಷ್ಟಿಕೋನ ದೊರೆಯುವುದು. ಈ ಕತೆಗಳನ್ನು ನೋಡಿದಾಗ **silent movie** ನೋಡಿದ ಹಾಗೆ ಆಗುತ್ತದೆ. ಇಂಥ ಚಿತ್ರಗಳು ಮಾತಿಗಿಂತ ಹೆಚ್ಚಿನದನ್ನು ಹೇಳುತ್ತವೆ. ವ್ಯಾಸರ ಕತೆಗಳ ಮಾತುಗಳು ಚಿತ್ರಗಳಂತೆ ಕಾಣುತ್ತವೆ. ನಾವೆಲ್ಲಾ ಮೂಕಿಚಿತ್ರಗಳನ್ನು ನೋಡುತ್ತಿರುವ ಅನುಭವವನ್ನು ಅವು ಕೊಡುತ್ತವೆ. ಓದುಗ ಕೆಲವೊಮ್ಮೆ ಅವಾಕ್ಕಾಗುತ್ತಾನೆ. ಕೆಲವೊಮ್ಮೆ ಒಂದು ರೀತಿ ದಿಗ್ಭ್ರಾಂತನಾಗುತ್ತಾನೆ. ಒಂದು ಸಮಸ್ಯೆಯ ಕಡೆ ಬೆಳಕು ಚೆಲ್ಲುವ ಕ್ರಮ ಹಾಗಿರುತ್ತದೆ. ಅಂದರೆ, ಒಂದು ಖಚಿತವಾದ ವ್ಯಾಖ್ಯೆ, ವ್ಯಾಖ್ಯಾನಗಳಿಗೆ ಒಳಪಡಿಸಲಾಗದೇ ಇರತಕ್ಕಂತಹ ಪಠ್ಯವನ್ನು ಕತೆಗಾರ ನಿರ್ಮಾಣ ಮಾಡುತ್ತಾ ಇರುತ್ತಾನೆ. ನಮ್ಮಲ್ಲಿ ಕೆಲವು ಕತೆಗಾರರ ಕತೆಗಳಿಗೆ ವ್ಯಾಖ್ಯಾನಗಳು ಸಿದ್ಧವಾಗಿಬಿಟ್ಟಿವೆ. ಉದಾ: ಮಾಸ್ತಿಯವರ ಕತೆಗಳು. ಅದಕ್ಕೆ ಹೊಸ ವ್ಯಾಖ್ಯಾನ ಕಷ್ಟವಿದೆ. ಆದರೆ ವ್ಯಾಸರದ್ದು ಓದುಗನಿಂದ ವ್ಯಾಖ್ಯಾನ ಸಿದ್ಧಗೊಳ್ಳುವ ಕತೆಗಳು. ಓದುಗನಿಂದ ಓದುಗನಿಗೆ ಈ ವ್ಯಾಖ್ಯಾನ ಭಿನ್ನವಾಗುತ್ತದೆ. ಓದುಗ ತನ್ನ ಅನುಭವದಿಂದ ಪಠ್ಯವನ್ನು ಕಟ್ಟಿಕೊಳ್ಳುತ್ತಾನೆ. ವಿಮರ್ಶಕ ಕೊಡುವ ವ್ಯಾಖ್ಯಾನಗಳಿಗಿಂತ ಓದುಗ ಕಲ್ಪಿಸಿಕೊಳ್ಳುವ ತನ್ನದೇ ವ್ಯಾಖ್ಯಾನ ಮುಖ್ಯ. ಹೀಗೆ ಓದುಗರ ಮೂಲಕ ವ್ಯಾಖ್ಯಾನ ಕಟ್ಟಿಕೊಳ್ಳುವುದು ವ್ಯಾಸರ ಕತೆಗಳ ವೈಶಿಷ್ಟ್ಯ. ಹಲವು ಆಯಾಮಗಳು ಓದುಗನಿಗೆ ಇಲ್ಲಿ ದೊರೆಯಬಹುದು. ಹೀಗಾಗಿ ಓದುಗ ಕ್ರಿಯಾಶೀಲವಾಗಿ ವ್ಯಾಸರ ಕತೆಗಳಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ.

ಸಾವಿನ **intensify**ಯ ಜತೆಗೇ ಒಂದು ಸೃಷ್ಟಿಶೀಲತೆಯ ಗುಣವೂ ವ್ಯಾಸರ ಕತೆಗಳಿಗಿವೆ. ವಿರೋಧಗಳನ್ನೂ ವಿಸಂಗತಿಗಳನ್ನೂ ಜೋಡಿಸುವ ಕಲೆ ವ್ಯಾಸರಿಗೆ ಚೆನ್ನಾಗಿ ಸಿದ್ಧಿಸಿದೆ. ಭಯ